## ದೂರದರ್ಶನ ಸಂಸ್ಥಾಪನಾ ದಿನಾಚರಣೆ

# ಸಮುದಾಯ ಮಾಧ್ಯಮ ಉನ್ನತ ಸಾಧನೆಗೆ ಪ್ರೇರಕ

ಕಲಬುರ್ಗಿ, 15– ಸಮುದಾಯ ಮಾಧ್ಯಮಗಳ ಸಹಾಯದಿಂದ ಗ್ರಾಮೀಣ ಪ್ರದೇಶದಲ್ಲಿ ಇದ್ದುಕೊಂಡು ಉನ್ನತ ಸಾಧನೆ ಮಾಡಲು ಸಾಧ್ಯವಿದೆ ಎಂದು ಡೆಕ್ಕನ್ ಡವಲಪ್‌ಮೆಂಟ್ ಸೊಸೈಟಿ ಹಾಗೂ ಕಲಬುರ್ಗಿ ದೂರದರ್ಶನದ ಮೊದಲ ನಿರ್ದೇಶಕ ಪಿ.ವಿ ಸತೀಶ ಹೇಳಿದರು.

ನಗರದ ದೂರದರ್ಶನ ಸಂಸ್ಥಾಪನ ದಿನಾಚರಣೆ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ "ಸಮುದಾಯ ಮಾಧ್ಯಮ" ಕುರಿತು ಅವರು ಮಾತನಾಡಿದರು.

ಮಾಧ್ಯಮಗಳ ಸಂವಹನಶಾಸ್ತ್ರ ಮಹಾಭಾರತದಲ್ಲಿ ಜನರ ಪ್ರಜ್ಞೆ ತಪ್ಪಿಸುವದಾಗಿತ್ತು, ವಿದ್ಯುನ್ಮಾನ ವಾಹಿನಿಗಳು ಕೇವಲ ಟಿ.ಆರ್.ಪಿ (ಟೆಲಿವಿಷನ್ ರೇಟಿಂಗ್ ಪಾಯಿಂಟ್) ಸಲುವಾಗಿ ಸುದ್ಧಿ ವೈಭವೀಕರಣ ಮಾಡುತ್ತಿವೆ, ವೀಕ್ಷಕರನ್ನು ಆಕರ್ಷಿಸುವ ಉದ್ದೇಶದಿಂದ ಬ್ರೇಕಿಂಗ್ ನ್ಯೂಸ್ ಹಾವಳಿ ಹೆಚ್ಚಾಗಿದೆ ಎಂದರು. ಪ್ರತಿ ಘಟನೆಯನ್ನು ಅಮಾನವೀಯವಾಗಿ ಬಿತ್ತರ ಮಾಡುವುದು ಮಾಧ್ಯಮಗಳು ನಿತ್ಯ ಕಾಯಕದ ಭಾಗವನ್ನಾಗಿ ಮಾಡಿಕೊಂಡಿವೆ ಎಂದು ವಿಷಾದಿಸಿದರು.



ಜನಪದ ಕಲೆ, ದೇಶಿಯ ಸಂಸ್ಕೃತಿ, ಕೃಷಿ, ಗ್ರಾಮೀಣಾಭಿವೃದ್ಧಿ ಹಾಗೂ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ದೂರದರ್ಶನದಲ್ಲಿ ಹೆಚ್ಚು ಅವಕಾಶವಿದೆ, ದುರಾದೃಷ್ಟವಶಾತ್ ಖಾಸಗೀಕರಣ ಹಾಗೂ ಜಾಗತೀಕರಣದ ಪ್ರಭಾವದಿಂದ ಜನತೆ ಡಿ.ಡಿಯಿಂದ ದೂರವಾಗುತ್ತಿದ್ದಾರೆ. ಇಂದಿನ ಮಾಧ್ಯಮಗಳು ಉನ್ನತ ವರ್ಗದವರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿವೆ ಇದರಿಂದ ಉಳ್ಳವರ ವರ್ಗದವರಿಗೆ ಮಾಧ್ಯಮ ಹತ್ತಿರವಾಗುತ್ತಿದೆ, ಇದರಿಂದ ಗ್ರಾಮೀಣ ಭಾಗದ ಜನರ ಗೋಳು ಜನಪರ ಕೇಳುವರಿಲ್ಲದಂತಾಗಿದೆ ಎಂದರು. ಜನತೆಗೆ ಹತ್ತಿರವಾಗಿ ಅವರ ನಿತ್ಯ ಬದುಕಿನ ಹಾಗೂ ಸಾಮಾಜಿಕ ಜೀವನದ ಸಂಗತಿಗಳನ್ನು ಮತ್ತು ತಮ್ಮಲ್ಲಿನ ಪ್ರತಿಮೆಯನ್ನು ವ್ಯಕ್ತಪಡಿಸಲು ಸಮುದಾಯ ಮಾಧ್ಯಮ ವೇದಿಕೆಯಾಗಿದೆ, ಇದರಿಂದ ಅನೇಕ ಅನಕ್ಷರಸ್ಥ ಮಹಿಳೆಯರು ತಮ್ಮ ಚೌಕಟ್ಟಿನ ವ್ಯಾಪ್ತಿಯಲ್ಲಿ ಉನ್ನತ ಸಾಧನೆ ಮಾಡಲು ಸಹಾಯಕವಾಗಿದೆ, ಇಡೀ ವಿಶ್ವವನ್ನೆ ಗ್ರಾಮವನ್ನಾಗಿ ಪರಿವರ್ತಿಸಿ ಜನರನ್ನು ಹತ್ತಿರ ಮಾಡುವ ಶಕ್ತಿ ಸಮುದಾಯ ಮಾಧ್ಯಮಕ್ಕಿದೆ ಎಂದು ನುಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಸತ್ಯಮೂರ್ತಿ, ದೂರದರ್ಶನ ಕೇಂದ್ರದ ಸಹಾಯಕ ನಿರ್ದೇಶಕ ಎಮ್.ಬಿ. ಪಾಟೀಲ ಹಾಗೂ ಕೆ.ಟಿ ಮೂರ್ತಿ ಉಪಸ್ಥಿತರಿದ್ದರು.